ನಿ-72 (84)

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಎ ತಿಪ್ಪೇಸ್ವಾಮಿ ಇವರು ನಿಯಮ 72 ರಡಿ ನೀಡಿರುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಯವರ ಉತ್ತರ:**

**ವಿಷಯ:** ರಾಜ್ಯ ಅರಣ್ಯ ಸೇವೆಯಿಂದ ಭಾರತೀಯ ಅರಣ್ಯ ಸೇವೆಗೆ ಪದನ್ನೋತಿ ಹೊಂದುವ ಅಧಿಕಾರಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸುವ ಬಗ್ಗೆ.

* * *

ರಾಜ್ಯದ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ವೃಂದದಲ್ಲಿ 164 ಐಎಫ್‌ಎಸ್ ಹುದ್ದೆಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿರುತ್ತವೆ. ಈ ಹುದ್ದೆಗಳಲ್ಲಿ 115 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಮತ್ತು 49 ಹುದ್ದೆಗಳನ್ನು ರಾಜ್ಯ ಅರಣ್ಯ ಸೇವೆಯ ಅರ್ಹ ಅಧಿಕಾರಿಗಳಿಗೆ ಬಡ್ತಿ ನೀಡುವ ಮೂಲಕ ತುಂಬಲು ಅವಕಾಶವಿರುತ್ತದೆ.

ದಿನಾಂಕ: 01.01.2021 ಕ್ಕೆ ಅನ್ವಯಿಸುವಂತೆ, ಮುಂಬಡ್ತಿ ಮೂಲಕ ತುಂಬಲು 42 ಖಾಲಿ ಹುದ್ದೆಗಳು ಇರುತ್ತವೆ. ಈ ಖಾಲಿ ಹುದ್ದೆಗಳು 2013 ರಿಂದ 2020 ರ ಅವಧಿಯಲ್ಲಿ ಲಭ್ಯವಾದ ರಿಕ್ತ ಸ್ಥಾನಗಳಾಗಿರುತ್ತವೆ. ಈ ಖಾಲಿ ಹುದ್ದೆಗಳನ್ನು ತುಂಬಲು ಕೇಂದ್ರ ಸರ್ಕಾರವು ಸಹಮತಿಯನ್ನು ಡಿಸೆಂಬರ್/2020 ರಲ್ಲಿ ನೀಡಿರುತ್ತದೆ.

2013, 2014 ಮತ್ತು 2015 ನೇ ಸಾಲಿನ ರಿಕ್ತಸ್ಥಾನಗಳನ್ನು ಭರ್ತಿ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಲೋಕ ಸೇವಾ ಆಯೋಗಕ್ಕೆ ದಿನಾಂಕ: 07.11.2016 ರಂದು ಸಲ್ಲಿಸಲಾಗಿತ್ತು. ಪ್ರಸ್ತಾವನೆಯಲ್ಲಿನ ಕೆಲವು ತಾಂತ್ರಿಕ ಲೋಪಗಳನ್ನು ಪರಿಶೀಲಿಸಿ ಮರು ಸಲ್ಲಿಸುವಂತೆ ಆಯೋಗವು ಪ್ರಸ್ತಾವನೆಯನ್ನು ಹಿಂದಿರುಗಿಸಿರುತ್ತದೆ. ಸದರಿ ಲೋಪಗಳನ್ನು ಸರಿಪಡಿಸಿ ಸಲ್ಲಿಸುವ ಸಮಯದಲ್ಲಿ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಶ್ರೀ ಬಿ.ಕೆ.ಪವಿತ್ರ ಪ್ರಕರಣ-1 ರಲ್ಲಿ ನೀಡಿದ ತೀರ್ಪಿನ ಹಿನ್ನಲೆಯಲ್ಲಿ ಅರಣ್ಯ ಇಲಾಖೆಯ ವಿವಿಧ ವೃಂದಗಳ ಜೇಷ್ಠತೆಯನ್ನು ಮರುನಿಗದಿಗೊಳಿಸುತ್ತಿರುವುದರಿಂದ ಪರಿಷ್ಕೃತ ಪ್ರಸ್ತಾವನೆಯನ್ನು ಕೇಂದ್ರ ಲೋಕ ಸೇವಾ ಆಯೋಗಕ್ಕೆ ಸಲ್ಲಿಸುವಲ್ಲಿ ವಿಳಂಬವಾಗಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಶ್ರೀ ಬಿ.ಕೆ.ಪವಿತ್ರ ಪ್ರಕರಣ-1 ರಲ್ಲಿ ನೀಡಿದ ತೀರ್ಪಿನ ಹಿನ್ನಲೆಯಲ್ಲಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ದಿನಾಂಕ 10.01.2018 ರಂದು ಪ್ರಕಟಿಸಿ ಪರಿಷ್ಕೃತ ಪ್ರಸ್ತಾವನೆಯನ್ನು ದಿನಾಂಕ 05.11.2018 ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಅರಣ್ಯ ಇಲಾಖೆಯು ಸಲ್ಲಿಸಿರುತ್ತದೆ. ಆದರೆ, ಮಾನ್ಯ ಸರ್ವೋಚ್ಛ ನ್ಯಾಯಾಲಯವು, ಶ್ರೀ ಬಿ.ಕೆ.ಪವಿತ್ರ ಪ್ರಕರಣ-2 ರಲ್ಲಿ ನೀಡಿದ ಅಂತಿಮ ತೀರ್ಪಿನ ಹಿನ್ನಲೆಯಲ್ಲಿ ಜೇಷ್ಠತಾ ಪಟ್ಟಿಗಳನ್ನು ಮರುನಿಗದಿಗೊಳಿಸಿ ಪರಿಷ್ಕೃತ ಪಟ್ಟಿಯನ್ನು ಸಿ.ಆ.ಸು ಇಲಾಖೆಗೆ ಅರಣ್ಯ ಇಲಾಖೆಯು ಕಳುಹಿಸಬೇಕಾಗಿರುತ್ತದೆ. ಅದರಂತೆ, ದಿನಾಂಕ 18.10.2019 ರಂದು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಅರಣ್ಯ ಇಲಾಖೆಯನ್ನು ಕೋರಲಾಗಿದ್ದು, ಅರಣ್ಯ ಇಲಾಖೆಯ ಅಧಿಕಾರಿಗಳ ಸೇವಾ ಹಿರಿತನ ಮತ್ತು ಪದೋನ್ನತಿ ನೀಡುವ ಬಗ್ಗೆ ಎದುರಿಸುತ್ತಿರುವ ಹಲವು ನ್ಯೂನತೆಗಳನ್ನು ಸರಿಪಡಿಸಿ ಅರಣ್ಯ ಇಲಾಖೆಯ ವಿವಿಧ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಅಪಜೀ 116 ಅಪಸೇ 2019 ದಿನಾಂಕ: 11.11.2019 ರಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ನೀಡಿರುವ ವರದಿಯ ಅನುಸಾರ ಅರಣ್ಯ ಇಲಾಖೆಯ ಪೋಷಕ ವೃಂದದ ಜೇಷ್ಠತಾ ಪಟ್ಟಿಗಳನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ. ರಾಜ್ಯ ಅರಣ್ಯ ಸೇವೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಕರಡು ಜೇಷ್ಠತಾ ಪಟ್ಟಿಯನ್ನು ದಿನಾಂಕ: 14.12.2020 ರಂದು ಅರಣ್ಯ ಇಲಾಖೆಯು ಪ್ರಕಟಣೆಗೊಳಿಸಿದ್ದು, ಸದರಿ ಕರಡು ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕರಿಸಲಾಗಿರುವ ಆಕ್ಷೇಪಣಾ ಮನವಿಗಳನ್ನು ಪರಿಶೀಲಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿ ಬಾಕಿಯಿರುತ್ತದೆ.

ಅರಣ್ಯ ಇಲಾಖೆಯು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ ನಂತರ ರಾಜ್ಯ ಅರಣ್ಯ ಸೇವಾ ಅಧಿಕಾರಿಗಳಿಗೆ ಭಾರತೀಯ ಅರಣ್ಯ ಸೇವಾ ವೃಂದಕ್ಕೆ ಮುಂಬಡ್ತಿ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಕೇಂದ್ರ ಲೋಕಸೇವಾ ಆಯೋಗಕ್ಕೆ ಕಳುಹಿಸುವ ಬಗ್ಗೆ ಕ್ರಮವಹಿಸಲಾಗುವುದು.

**ಸಂಖ್ಯೆ: ಸಿಆಸುಇ 28 ಎಸ್‌ಎಫ್‌ಪಿ 2021**

(ಸಹಿ)
**(ಬಿ.ಎಸ್ ಯಡಿಯೂರಪ್ಪ)**
ಮುಖ್ಯಮಂತ್ರಿಗಳು